# 16th Round of India-Israel Foreign Office Consultations

December 07, 2020

---

## ಭಾರತ–ಇಸ್ರೇಲ್ ವಿದೇಶಾಂಗ ಕಚೇರಿ ಸಮಾಲೋಚನೆಯ 16ನೇ ಸುತ್ತಿನ ಸಭೆ

ಡಿಸೆಂಬರ್ 07, 2020

1. ಭಾರತ–ಇಸ್ರೇಲ್ ವಿದೇಶಾಂಗ ಕಚೇರಿ ಸಮಾಲೋಚನೆಗಳ 16ನೇ ಸುತ್ತಿನ ಸಭೆ 7 ಡಿಸೆಂಬರ್ 2020 ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಯಿತು. ಸಭೆಯ ಸಹ–ಅಧ್ಯಕ್ಷತೆಯನ್ನು (ಸಿಪಿವಿ ಮತ್ತು ಒಐಎ) ಕಾರ್ಯದರ್ಶಿ ಶ್ರೀ ಸಂಜಯ್ ಭಟ್ಟಾಚಾರ್ಯ ಮತ್ತು ಇಸ್ರೇಲ್ನ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಮಹಾನಿರ್ದೇಶಕ ಶ್ರೀ ಅಲೋನ್ ಉಸ್ಪಿಜ್ ವಹಿಸಿದ್ದರು.
2. ನಡೆಯುತ್ತಿರುವ ಸಹಕಾರದ ಪ್ರಗತಿಯನ್ನು ಎರಡೂ ಕಡೆಯವರು ಸಮಗ್ರವಾಗಿ ಪರಿಶೀಲಿಸಿದ್ದಾರೆ, ವಿಶೇಷವಾಗಿ ರಕ್ಷಣಾ ಮತ್ತು ಭದ್ರತೆ, ಭಯೋತ್ಪಾದನೆ ನಿಗ್ರಹ, ಸೈಬರ್ ಭದ್ರತೆ, ಮತ್ತು ನೀರು ಹಾಗೂ ಕೃಷಿ, ವಿಜ್ಞಾನ ಮತ್ತು ತಂತ್ರಜ್ಞಾನ, ನಾವೀನ್ಯತೆ ಮತ್ತು ಪ್ರಾರಂಭ, ಶಕ್ತಿ, ಶೈಕ್ಷಣಿಕ ಸಹಯೋಗ, ವ್ಯಾಪಾರ ಮತ್ತು ಪರಸ್ಪರ ಹೂಡಿಕೆಗಳನ್ನು ಹೆಚ್ಚಿಸುವುದು.
3. ಜಂಟಿಯಾಗಿ ಅಭಿವೃದ್ಧಿಪಡಿಸಿದ ಕೃಷಿ ಉತ್ಕೃಷ್ಟತೆ, ಬುಂದೇಲ್‌ಖಂಡ್ ಪ್ರದೇಶದ ನೀರಿನ ಸಂರಕ್ಷಣೆ ಕುರಿತ ಪ್ರಾಯೋಗಿಕ ಯೋಜನೆ ಮತ್ತು ನಿರ್ದಿಷ್ಟ ತಂತ್ರಜ್ಞಾನಗಳ ಸಹ–ಅಭಿವೃದ್ಧಿಗೆ ಹೆಚ್ಚು ಬೆಂಬಲವನ್ನು ಒದಗಿಸಲು ಅಹಮದಾಬಾದ್ ಮೂಲದ ಉದ್ಯಮಶೀಲತೆ ಹಾಗೂ ತಂತ್ರಜ್ಞಾನದ ಅಂತರರಾಷ್ಟ್ರೀಯ ಕೇಂದ್ರ (iCreate) ಮತ್ತು ಇಸ್ರೇಲಿ ಸ್ಟಾರ್ಟ್–ಅಪ್ ನೇಷನ್ಸ್ ಸೆಂಟ್ರಲ್ (SNC) ನಡುವಿನ ನಿಕಟ ಸಹಯೋಗದ ಯಶಸ್ಸನ್ನು ವಿಶೇಷವಾಗಿ ಪ್ರಶಂಸಿಸಲಾಯಿತು.
4. ಜಂಟಿ ಶೈಕ್ಷಣಿಕ ಮತ್ತು ವೈಜ್ಞಾನಿಕ ಸಂಶೋಧನಾ ಕಾರ್ಯಾಚರಣೆಗಳಿಗೆ ಅನುಕೂಲವಾಗುವಂತೆ ಪಾತ್ರಗಳನ್ನು ಬೆಂಬಲಿಸಿದ್ದಕ್ಕಾಗಿ ಇಂಡೋ–ಇಸ್ರೇಲ್ ಕೈಗಾರಿಕಾ ಸಂಶೋಧನೆ ಹಾಗೂ ಅಭಿವೃದ್ಧಿ ಮತ್ತು ತಾಂತ್ರಿಕ ನಾವೀನ್ಯತೆ ನಿಧಿ (I4F) ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗ (UGC)–ಇಸ್ರೇಲ್ ಸೈನ್ಸ್ ಫೌಂಡೇಶನ್ (ISF) ನಿಧಿಯನ್ನು ಎರಡೂ ಕಡೆಯವರು ಪ್ರಶಂಸಿಸಿದರು.
5. Covid-19 ಸಾಂಕ್ರಾಮಿಕ ರೋಗವನ್ನು ನಿಭಾಯಿಸಲು ರಾಷ್ಟ್ರೀಯ ಮಟ್ಟದಲ್ಲಿ ಅವರು ಕೈಗೊಳ್ಳುತ್ತಿರುವ ಕ್ರಮಗಳಲ್ಲಿ ಮತ್ತು ವೈದ್ಯಕೀಯ ಸಂಶೋಧನೆಯಲ್ಲಿ ನಡೆಯುತ್ತಿರುವ ಸಹಕಾರ ಕುರಿತು ಎರಡೂ ಕಡೆಯವರು ಚರ್ಚಿಸಿದರು.
6. ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ವಿಷಯಗಳ ಬಗ್ಗೆ ಎರಡೂ ಕಡೆಯವರು ತೀವ್ರವಾಗಿ ಅಭಿಪ್ರಾಯ ವಿನಿಮಯ ಮಾಡಿಕೊಂಡರು.
7. ನಿಯಮಿತ ಭೇಟಿಗಳ ಮತ್ತು ಸಮಾಲೋಚನೆಗಳ ವಿನಿಮಯದ ಮೂಲಕ ಸಂಬಂಧವನ್ನು ಹತ್ತಿರ ಇಟ್ಟುಕೊಳ್ಳುವ ಮತ್ತು ಆವೇಗವನ್ನು ಮುಂದುವರೆಸುವ ಮಹತ್ವವನ್ನು ಎರಡೂ ಕಡೆಯವರು ಒಪ್ಪಿಕೊಂಡರು ಹಾಗೂ ಮುಂದಿನ ಸುತ್ತಿನ ವಿದೇಶಾಂಗ ಕಚೇರಿ ಸಮಾಲೋಚನೆಗಳನ್ನು ಪರಸ್ಪರ ಅನುಕೂಲಕರ ದಿನಾಂಕದಂದು ನಡೆಸಲು ಒಪ್ಪಿದರು.

**ನವ ದೆಹಲಿ**
**ಡಿಸೆಂಬರ್ 07, 2020**

DISCLAIMER: This is an approximate translation. The original is available in English on MEA’s website and may be referred to as the official press release.